# ಹಿಪ್ ಹಿಪ್ಸ್ ಹುರ್‍ರ್ರೆ..!

‘ಜೀರೋ ಸೈಜ್’ ಕ್ರೇಜ್ ಒಂದೇ ಸಮನೆ ಏರುತ್ತಿದೆ. ನಮ್ಮ ಬಾಲಿವುಡ್ ನಟಿ ಕರೀನಾ ಕಪೂರ್ ಈ ನಿಟ್ಟಿನಲ್ಲಿ ಭಾರತೀಯ ಲಲನಾಮಣಿಗಳಿಗೆ ಮಾದರಿ. ಈ ಜೀರೋ ಸೈಜ್‌ಗಾಗಿ ಹೆಣ್ಣು ಮಕ್ಕಳು ಮಾಡದ ಕಸರತ್ತುಗಳಿಲ್ಲ. ಹೆಣ್ಣು ಮಕ್ಕಳ ಸಪೂರ ದೇಹಾಕೃತಿಯ ಸುತ್ತ ಗಿರಕಿ ಹೊಡೆಯುತ್ತಿರುವ ಗ್ರಾಹಕ ವಸ್ತುಗಳಿಗೂ ಕೊರತೆಯಿಲ್ಲ. ಫ್ಯಾಶನ್ ಹೆಸರಿನಲ್ಲಿ ಗ್ರಾಹಕ ಉತ್ಪನ್ನಗಳ ದೊಡ್ಡದೊಂದು ಮಾರುಕಟ್ಟೆಯೇ ಸೃಷ್ಟಿಯಾಗಿದೆ. ಅದು ಕೋಟ್ಯಾಂತರ ರೂಪಾಯಿಗಳ ವಹಿವಾಟು.

ಆದರೆ ಇಲ್ಲಿ ಚಿತ್ರದಲ್ಲಿ ಕಾಣಿಸಿಕೊಂಡಿರುವ ಮೈಕೆಲ್ ರಫ್ನೆಲ್ಲಿಯ ಸೌಂದರ್ಯದ ಗುಟ್ಟೇ ಬೇರೆ! ಈಕೆ ಪ್ಲಸ್ ಸೈಜ್ ಮಾಡೆಲ್. ಈಕೆಗೆ ತನ್ನ ಗಜಗಾತ್ರದ ನಿತಂಬಗಳ ಬಗ್ಗೆ ಎಲ್ಲಿಲ್ಲದ ಹೆಮ್ಮೆ. ಬರೋಬ್ಬರಿ 8 ಅಡಿಗಳ ಸುತ್ತಳತೆ ಹೊಂದಿರುವ ಈಕೆಯ ನಿತಂಬಗಳು ‘ವರ್ಲ್ಡ್ ರೆಕಾರ್ಡ್ ಅಕಾಡೆಮಿ’ಯ ಪ್ರಕಾರ ಪ್ರಪಂಚದಲ್ಲೇ ಅತ್ಯಂತ ದೊಡ್ಡ ಸೈಜಿನ ಹಿಪ್ಸ್. ಈ ವಿಶ್ವ ದಾಖಲೆಯು ಈಕೆಯನ್ನು ಮತ್ತಷ್ಟು ಹಿಗ್ಗಿನಿಂದ ಉಬ್ಬುವಂತೆ ಮಾಡಿದೆ. ಲಾಸ್ ಏಂಜಲೀಸ್‌ನಲ್ಲಿರುವ 39ರ ಹರೆಯದ ಮೈಕೆಲ್ ರಫ್ನೆಲ್ಲಿಯ ಎತ್ತರ 5 ಅಡಿ 4 ಇಂಚು. ನಾಲ್ಕು ಮಕ್ಕಳ ಈ ಮಾತೆಯ ತೂಕ 190 ಕೆ.ಜಿ.

ಇಷ್ಟು ಭರ್ಜರಿ ದೇಹದಾಕಾರವನ್ನು ಹೊಂದಲು ಈಕೆ ಸರ್ಜರಿ ಮಾಡಿಸಿಕೊಂಡಿರಬೇಕು ಎನ್ನುವುದು ಹಲವರ ಗುಮಾನಿ. ‘ಆದರೆ ಇದು ಹುಟ್ಟಿನಿಂದ ಸ್ವಾಭಾವಿಕವಾಗಿಯೇ ಬಂದಿರುವುದು’ ಎಂದು ಸಂದರ್ಶನವೊಂದರಲ್ಲಿ ಮೈಕೆಲ್ ಹೇಳಿಕೊಂಡಿದ್ದಾಳೆ. ದಿನಕ್ಕೆ ಸುಮಾರು 3000 ಕ್ಯಾಲೊರಿ ಆಹಾರವನ್ನು ಸೇವಿಸುವ ಈಕೆ ಮಲಗುವುದು 7 ಅಡಿ ಅಗಲದ ಹಾಸಿಗೆಯ ಮೇಲೆ. ಕಾರಿನಲ್ಲಿ ದಢೂತಿ ದೇಹ ತೂರುವುದಿಲ್ಲವಾದ್ದರಿಂದ ಈಕೆ ದೊಡ್ಡ ಟ್ರಕ್‌ನಲ್ಲಿಯೇ ಸಂಚಾರ ಮಾಡುತ್ತಾಳೆ. ರೈಲು ಅಥವಾ ವಿಮಾನದಲ್ಲಿ ಪಯಣಿಸುವಾಗ 2 ಟಿಕೆಟ್ ಕೊಳ್ಳಬೇಕು! ಇದು ದುಬಾರಿ ಎನ್ನುವುದು ಈಕೆಯ ಅಭಿಪ್ರಾಯ.

ಹಲವಾರು ಸಮಾರಂಭಗಳಿಗೆ ಮುಖ್ಯ ದ್ವಾರದಲ್ಲಿ ಹೋಗಲಾಗದೆ ಪಕ್ಕದಲ್ಲಿ ಸ್ಥಳ ಮಾಡಿಕೊಂಡು ಹೋಗಬೇಕಾಗುತ್ತದಂತೆ. ರಸ್ತೆಯಲ್ಲಿ ಓಡಾಡುವಾಗ ಎಲ್ಲರೂ ಈಕೆಯ ಕಡೆಗೇ ಅಚ್ಚರಿಯಿಂದ ನೋಡುತ್ತಾರಂತೆ. ಕೆಲವರು ಮುಸಿ ಮುಸಿ ನಕ್ಕರೆ, ಇನ್ನು ಕೆಲವರು ಫೋಟೋ ಕ್ಲಿಕ್ಕಿಸುತ್ತಾರಂತೆ. ಸದ್ಯಕ್ಕೆ ಈಕೆ ಜನಪ್ರಿಯ ಮಾಡೆಲ್. ರೂಪದರ್ಶಿಯಾಗಿ ಒಂದು ಫೋಟೋ ಶೂಟ್‌ಗೆ ಸಾವಿರಾರು ಡಾಲರ್ ಶುಲ್ಕ ವಿಧಿಸುತ್ತಾಳೆ.

ಯಾರು ಏನೇ ಆಡಿಕೊಂಡರೂ ಕಳೆದ 10 ವರ್ಷಗಳಿಂದ ಈಕೆಯ ಜತೆಯಲ್ಲಿ ಸಂಸಾರ ನಡೆಸುತ್ತಿರುವ ಗಂಡ ರೆಗ್ಗಿ ಬ್ರೂಕ್ಸ್ ತಲೆ ಕೆಡಿಸಿಕೊಂಡಿಲ್ಲ. ಆತನಿಗೆ ಹೆಂಡತಿಯ ಭಾರೀ ದೇಹಾಕಾರ ಬಲು ಅಚ್ಚುಮೆಚ್ಚಂತೆ!

■ ವಿದ್ಯಾ ವಿ. ಹಾಲಭಾವಿ



